ಕೇಳಿ ತೆಂಗಿನೆಣ್ಣೆ ತೆಗೆದುಕೊಂಡು ಬಂದು ಕುಟ್ಟನಿಗೆ ಸವರಿ ಅವನನ್ನು ಸಂತೈಸಿದಳು. ಮೈ ಇಡೀ ಎಣ್ಣೆಯಾಗಿದ್ದ ಕುಟ್ಟನನ್ನು ಅವಳು ಹಾಸಿಗೆಯಲ್ಲಿ ಒಟ್ಟಿಗೆ ಮಲಗಿಸಿಕೊಳ್ಳುವಂತಿರಲಿಲ್ಲ. ಅಕ್ಕ ಅವನನ್ನು ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿ ಎದುರಲ್ಲಿ ಸ್ವಲ್ಪ ಹುಲ್ಲು ಹಾಕಿ ಬಂದಳು. ಅಲಿಮಾಳಿಗೆ ಕುಟ್ಟನನ್ನು ಬಿಟ್ಟು ನಿದ್ದೆ ಬರಲೇ ಇಲ್ಲ. ಎಷ್ಟೋ ಹೊತ್ತಿನವರೆಗೆ ಕುಟ್ಟನ 'ಮೇss' ಕೇಳಿಸುತ್ತಲೇ ಇತ್ತು. ಆಗ ಆಲಿಮಾ ಕದಲುತ್ತಿದ್ದಳು. ರಾತ್ರಿ ಸುಮಾರು ಹೊತ್ತಿನ ಮೇಲೆ ಅವಳಿಗೆ ನಿದ್ದೆ ಬಂತು. ಬೆಳಗಿನ ಜಾವ ಇದ್ದಕ್ಕಿದ ಹಾಗೆ ಎಚ್ಚರವಾಯಿತು. ಕುಟ್ಟನ 'ಮೇss' ಕೇಳಿಸುತ್ತಿರಲಿಲ್ಲ. ಅವಳಿಗೆ ದಿಗಿಲಾಗಿ ಅಕ್ಕನನ್ನು ಎಬ್ಬಿಸಿದಳು. ಆ ಗಡಿಬಿಡಿಯಲ್ಲಿ ಭಾವನಿಗೂ ಎಚ್ಚರವಾಯಿತು. "ಕುಟ್ಟನ ಸ್ವರ ಕೇಳಿಸುತ್ತಿಲ್ಲ. ಏನೋ ಆಗಿರಬೇಕು" ಎಂದು ಅಲಿಮಾ ನಡುಗುವ ಸ್ವರದಲ್ಲಿ ಹೇಳಿದಳು. ಬಾಗಿಲು ತೆಗೆದು ಕೊಟ್ಟಿಗೆ ಬಳಿ ಓಡಿದಳು, ಕುಟ್ಟ ಹಗ್ಗ ಸಹಿತ ಮಾಯವಾಗಿದ್ದ!

ಬೆಳಗಾಯಿತು. ಅಕ್ಕ, ಭಾವ, ಅಲಿಮಾ ಮೂವರೂ ಕುಟ್ಟನನ್ನು ಹುಡುಕುತ್ತ ಮನೆ ಮನೆಗೆ ಅಲೆದರು. ಎಲ್ಲೂ ಕುಟ್ಟ ಕಾಣಸಿಗಲಿಲ್ಲ. ಹಸಿವೆ ತಡೆಯಲಿಕ್ಕಾಗದೆ ಮರಳಿ ಮನೆಗೆ ಬಂದರು. "ನಾವು ಯಾರಿಗೂ ಮೋಸ ಮಾಡಿದವರಲ್ಲ. ಅಲ್ಲಾ ನಮ್ಮ ಕೈ ಬಿಡಲಿಕ್ಕಿಲ್ಲ" ಎಂದು ಅಕ್ಕ ಅಲಿಮಾಳನ್ನು ಸಂತೈಸಿದಳು. ಅಲಿಮಾ ಏನನ್ನೂ ತಿನ್ನದೆ ಒಂದು ಮೂಲೆಯಲ್ಲಿ ಮುದುಡಿ ಕುಳಿತವಳು ಹೊತ್ತು ಸಂಜೆಯಾದರೂ ಅಲ್ಲಿಂದ ಏಳಲಿಲ್ಲ.

ಸಂಜೆ ಮದರಸದ ಮತ್ತು ಶಾಲೆಯ ಗೆಳತಿಯರು ಅವಳನ್ನು ಹುಡುಕಿಕೊಂಡು ಮನೆಗೆ ಬಂದರು. "ಕುಟ್ಟ ಸಿಗುವವರೆಗೆ ನಾನು ಮದರಸಕ್ಕೆ ಇಲ್ಲ, ಶಾಲೆಗೂ ಇಲ್ಲ" ಎಂದು ಬಿಕ್ಕಿ ಬಿಕ್ಕಿ ಅಳುತ್ತಾ ಅಲಿಮಾ ಹೇಳಿದಳು. "ಅದು ತಪ್ಪಿಸಿಕೊಂಡು ಓಡಿ ಹೋಗಿರಬೇಕು. ಅದಕ್ಕೆ ಕೊಬ್ಬು ಹೆಚ್ಚಾಗಿದೆ. ಅದು ಹೋದರೆ ಹೋಗಲಿ. ಅದಕ್ಕಿಂತ ಚೆನ್ನಾದ, ಚಿಕ್ಕದಾದ ಮುದ್ದು ಮರಿಯೊಂದನ್ನು ತಂದು ಕೊಡುತ್ತೇನೆ" ಭಾವ ಹೇಳಿದರೂ ಅವಳ ಕಣ್ಣೀರು ನಿಲ್ಲಲಿಲ್ಲ. ಅವಳ ಗೆಳತಿಯರು ಮನೆಗಳಿಗೆ ಹೋಗಿ ವಿಷಯ ತಿಳಿಸಿದರು. ಹಿರಿಯರು ಕುಟ್ಟನನ್ನು ಹುಡುಕುತ್ತಾ ಊರಿಡೀ ಅಲೆದರು. ಮುಕ್ರಿಚ್ಚನಿಗೂ ಸಂಗತಿ ವರದಿಯಾಯಿತು. ಕುಟ್ಟ ಮಾತ್ರ ಸಿಗಲೇ ಇಲ್ಲ. ಅಲಿಮಾ ಮೂಲೆ ಬಿಟ್ಟು ಕದಲಲಿಲ್ಲ.

ರಾತ್ರಿಯಾಯಿತು. ಅಕ್ಕ ಭಾವ ಆಹಾರ ತೆಗೆದುಕೊಳ್ಳುವಂತೆ ಅಲಿಮಾಳನ್ನು ಎಷ್ಟು ಒತ್ತಾಯಿಸಿದರೂ ಅವಳು ಏನನ್ನೂ ಮುಟ್ಟಲಿಲ್ಲ. ಗದರಿದರೆ ಕಣ್ಣೀರು ಹಾಕುತ್ತಿದ್ದಳು. ಅಕ್ಕ ಭಾವನೂ ಊಟ ಮಾಡದೆ ಉಪವಾಸ ಮಲಗಿದರು. ಅಲಿಮಾಳಿಗೆ ಕುಳಿತಲ್ಲಿಯೇ ಜೊಂಪು ಹತ್ತಿತ್ತು.

ಸರಿ ರಾತ್ರಿಯಲ್ಲಿ 'ಮೇss' ಸ್ವರ ಕೇಳಿ ಒಮ್ಮೆಲೇ ಎಚ್ಚರವಾದ ಅಲಿಮಾ ಅಕ್ಕ ಭಾವರನ್ನು ಎಬ್ಬಿಸಿದಳು. ಟಾರ್ಚು ಹಿಡಕೊಂಡು ಅವರು ಬಾಗಿಲು ತೆಗೆದು ಕೊಟ್ಟಿಗೆಗೆ ಹೋಗಿ ನೋಡಿದರೆ ಮುಕ್ರಿಚ್ಚ ಕುಟ್ಟನನ್ನು ಗೂಟಕ್ಕೆ ಕಟ್ಟಿ ಹಾಕುತ್ತಿದ್ದ!

**ಬಿ. ಪ್ರಭಾಕರ ಶಿಶಿಲ**

ಸುಳ್ಯದ ನೆಹರೂ ಮೆಮೋರಿಯಲ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ. ಕನ್ನಡದಲ್ಲಿ ಇನ್ನೂರಕ್ಕೂ ಹೆಚ್ಚು ಕತೆಗಳನ್ನು ಬರೆದಿದ್ದಾರೆ. ಕತೆಗಾರ ಮತ್ತು ಕಾದಂಬರಿಕಾರ. ಕನ್ನಡಕ್ಕೆ 220 ಕೃತಿಗಳನ್ನು ನೀಡಿದ ಹವ್ಯಾಸಿ ನಾಟಕಕಾರ ಮತ್ತು ಯಕ್ಷಗಾನ ಕಲಾವಿದ. ಇವರ 'ಪುಂಸ್ತ್ರೀ' ಕಾದಂಬರಿ 14 ಭಾಷೆಗಳಿಗೆ ಅನುವಾದವಾಗುತ್ತಿದೆ. ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ಶಿಶಿಲರು ರಚಿಸಿರುವ 160 ಕೃತಿಗಳು ಭಾರತದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಅವಲೋಕನ ಕೃತಿಗಳಾಗಿವೆ.